**ಒ ಎಸ್ ನಂ. 135/2023**
**ಪಿ ಡಬ್ಲ್ಯೂ: 01**

**ದಿಃ 10-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಅವಕಾಶ ನೀಡಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಶ್ರೀ ಎಸ್ ಜಿ ಎನ್ **ವಕೀಲರಿಂದಃ**

ಗ್ರಾಮ ನಮೂನೆಯ ಉತಾರಗಳನ್ನು ಹಾಜರ ಪಡಿಸಿದ್ದು ಅವುಗಳನ್ನು ನಿಪಿ-18 ರಿಂದ 15 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ 1 ರಿಂದ 7 ರ ಪರ ಶ್ರೀ ಎಸ್ ಆರ್ ಎಚ್ ವಕೀಲರಿಂದಃ**

ನಮ್ಮ ಅಜ್ಜ ಭೀಮಪ್ಪ ನಾನು ಚಿಕ್ಕವನಿದ್ದಾಗ ಮರಣ ಹೊಂದಿದ್ದಾರೆ. ನಮ್ಮ ಅಜ್ಜ ಹಾಗೂ ಆತನ ಸಹೋದರರು ತಮ್ಮ ಜೀವತ ಕಾಲದಲ್ಲಿ ಬೇರೆ ಬೇರೆ ಆಗಿ ವಾಸವಾಗಿದ್ದರು. ನಮ್ಮ ತಂದೆ ಹಾಗೂ ಆತನ ಸಹೋದರರು ತಮ್ಮ ಮನೆ ವ್ಯವಹಾರಗಳನ್ನು ಸ್ವತಂತ್ರವಾಗಿ ನಿರ್ವಹಿಸುತ್ತಿದ್ದರು ಅಂದರೆ ನಿಜ. ನಮ್ಮ ತಂದೆ ಹಾಗೂ ಆತನ ಸಹೋದರರು ತಮಗೆ ಸೇರಿದ ಜಮೀನುಗಳ ಮೇಲೆ ಪ್ರತ್ಯೇಕವಾಗಿ ಸಲಾ ಪಡೆದುಕೊಂಡು ಅವುಗಳನ್ನು ತೀರಿಸಿರುತ್ತಾರೆ ಅಂದರೆ ನಿಜ. ಸರ್ವೆ ನಂ 57/4 ರ ಆಸ್ತಿ ನಮಗೆ ನಮ್ಮ ಅಜ್ಜನಿಂದ ಬಂದಿದ್ದು ಅದನ್ನು ನಮ್ಮ ತಂದೆ ಹಾಗೂ ಆತನ ಸಹೋದರರು ಮಾರಾಟ ಮಾಡಿದ್ದಾರೆ ಅಂದರ ನಿಜ. ಹನಮಂತಪ್ಪ ತೀರಿಕೊಂಡ ನಂತರ ಆತನ ಹೆಂಡತಿ ಲಕ್ಷ್ಮವ್ವ ಇವರು ಸರ್ವೆ ನಂ 41/2 ರ ಜಮೀನನ್ನು ಮಾರಾಟ ಮಾಡಿದ್ದಾರೆ ಅಂದರೆ ನಿಜ. ನಮ್ಮ ಅಜ್ಜನಿಂದ ಬಂದ ತನ್ನ ಪಾಲಿನ ಹಿಸ್ಸೆಯನ್ನು ನಮ್ಮ ತಂದೆ ಹಾಗೂ ಆತನ ಸಹೋದರರು ಮಾರಾಟ ಮಾಡಿದ್ದಾರೆ ಅಂದರೆ ನಿಜ. ಅಜ್ಜನಿಂದ ಬಂದ ಮನೆ ಆಸ್ತಿಗಳನ್ನು ಹೊರತು ಪಡಿಸಿ ಎಲ್ಲಾ ಜಮೀನುಗಳನ್ನು ಮಾರಾಟ ಮಾಡಿದ್ದೇವೆ ಅಂದರೆ ನಿಜ. ಜಮೀನುಗಳನ್ನು ಮಾರಾಟ ಮಾಡುವ ಸಮಯದಲ್ಲಿ ಯಾರಾದರೂ ತಕರಾರು ಮಾಡಿದ್ದರೂ ಎನ್ನುವದು ನನಗೆ ಗೊತ್ತಿಲ್ಲ ಆಗ ನಾನು ಚಿಕ್ಕವನಿದ್ದೆ. ನಮ್ಮ ತಂದೆ ಜಮೀನು ಮಾರಾಟ ಮಾಡುವಾಗ ಆತನ ಉಳಿದ ಸಹೋದರರು ಯಾರು ತಕರಾರು ಮಾಡಿಲ್ಲ.

ಪಹಣಿ ಪತ್ರಿಕೆಗಳಲ್ಲಿ ಹೆಸರುಗಳು ಜಂಟಿ ಆಗಿ ಅಥವಾ ಪ್ರತ್ಯೇಕವಾಗಿ ದಾಖಲಾಗಿವೆ ಎನ್ನುವದು ನನಗೆ ಗೊತ್ತಿಲ್ಲ ಏಕೆಂದರೆ ನಾನು ಅನಕ್ಷರಸ್ಥ. 1957 ರಲ್ಲಿ ನಮ್ಮ ತಂದೆ ಹಾಗೂ ಆತನ ಸಹೋದರರು ಆಸ್ತಿಗಳನ್ನು ಭಾಗ ಮಾಡಿಕೂಂಡು 1962 ರಲ್ಲಿ ಅವರವರ ಹೆಸರುಗಳು ಆಸ್ತಿ ದಾಖಲೆಗಳಲ್ಲಿ ನಮೂದ ಆಗಿರುತ್ತವೆ ಎನ್ನುವದು ನನಗೆ ಗೊತ್ತಿಲ್ಲ.

ಮೃತ ಬಸವಣ್ಣೆಪ್ಪನ ಮಗ ಭೀಮಪ್ಪ ಇವರು ಸಲ್ಲಿಸಿದ ಅಸಲ ದಾವಾ ನಂ 87/2013 ರಲ್ಲಿ ನಾವು ಕೌಂಟರ ಕ್ಲೇಮ ಸಲ್ಲಿಸಿದ್ದು ಅದನ್ನು ಹಿಂಪಡೆದಿದ್ದೇವೆ ಅಂದರೆ ನಿಜ. ಹನಮಂತಪ್ಪ ಹಾಗೂ ಆತನ ಹೆಂಡತಿ ಲಕ್ಷ್ಮವ್ವ ಇವರಿಗೆ ಮಕ್ಕಳು ಇರಲಿಲ್ಲ ಅಂದರೆ ನಿಜ. ಮೃತ ಭೀಮಪ್ಪ ಇವರು ಸದರಿ ದಾವೆಯನ್ನು ಹನಮಂತಪ್ಪನಿಗೆ ಸೇರಿದ ಮನೆ ಆಸ್ತಿಗಳಿಗೆ

ಸಂಬಂಧಿಸಿದ ದಾವೆ ಸಲ್ಲಿಸಿದ್ದರು ಅಂದರೆ ನಿಜ. ಸಾಕ್ಷಿ ಮುಂದುವರೆದು ಅದರಲ್ಲಿ ಕೂಡಾ ಪಾಲು ಸರಿಯಾಗಿಲ್ಲ ಎಂದು ನಾವು ತಕರಾರು ಸಲ್ಲಿಸಿದ್ದೆವು ಎನ್ನುತ್ತಾರೆ. ಸದರಿ ದಾವೆ ಡಿಕ್ರಿ ಆಗಿರುತ್ತದೆ ಅಂದರೆ ನಿಜ.

**(**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು**,** ಕಾಲಾವಕಾಶ ನೀಡಲಾಯಿತು**)**

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**)

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**